***<u>ಸಾಕ್ಷಿಯನ್ನು ದಿಃ 29.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>***

***<u>ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದಃ–</u>***

***ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ನಾನೇ ಪ್ರಮಾಣೀಕರಿಸಿದ ನನ್ನ ಶಪಥ ಪತ್ರದ ಮೂಲಕ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ ಹಾಗೂ ಅವುಗಳಲ್ಲಿರುವ ಸಹಿಗಳು ನನ್ನವೇ ಆಗಿವೆ. ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಲಾಗಿದ್ದು ಅವುಗಳನ್ನು ನಿಶಾನೆಯಾಗಿ ಗುರುತಿಸಲಾಯಿತು.***

| | |
|---|---|
| *ನಿಪಿ.1* | *ಪ್ರಥಮ ವರ್ತಮಾನ ವರದಿ ಮತ್ತು ದೂರಿನ ದೃಢೀಕೃತ ನಕಲು* |
| *ನಿಪಿ.2* | *ಅಪಘಾತವಾದ ಸ್ಥಳದಲ್ಲಿ ತಯಾರಿಸಿದ ಮಹಜರು ಹಾಗೂ ಪಂಚನಾಮೆ ಮಾಡುವಾಗ ತೆಗೆಸಿರುವ ಫೋಟೋದ ದೃಢೀಕೃತ ನಕಲು* |
| *ನಿಪಿ.3* | *ವಾಹನ ಅಮಾನತ್ತು ಪಂಚನಾಮೆಯ ದೃಢೀಕೃತ ನಕಲು ಮತ್ತು ಫೋಟೋ* |
| *ನಿಪಿ.4* | *ಗಾಯದ ಪ್ರಮಾಣಪತ್ರದ ದೃಢೀಕೃತ ನಕಲು* |
| *ನಿಪಿ.5* | *ಐಎಂವಿ ವರದಿಯ ದೃಢೀಕೃತ ನಕಲು* |
| *ನಿಪಿ.6* | *ಸಂಪೂರ್ಣ ದೋಷಾರೋಪಣ ಪಟ್ಟಿಯ ದೃಢೀಕೃತ ನಕಲು ಒಟ್ಟು 15 ಪುಟಗಳನ್ನು ಒಟ್ಟಾಗಿ* |
| *ನಿಪಿ.7* | *ಒಂದು ಸಿಡಿ* |
| *ನಿಪಿ.8* | *37 ವೈಧ್ಯಕೀಯ ಬಿಲ್ಲುಗಳನ್ನು ಒಟ್ಟಾಗಿ* |
| *ನಿಪಿ.9* | *11 ವೈಧ್ಯರ ಸಲಹಾ ಚೀಟಿಗಳನ್ನು ಒಟ್ಟಾಗಿ, ಎಂದು ಗುರುತಿಸಲಾಯಿತು.* |

***ಅರ್ಜಿದಾರರ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ನೀಡಿ ಮುಂದೂಡಲಾಯಿತು***

*(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).*

*ಸಾ.ಓ.ಹೇ.ಕೆ.ಸ.ಇ.*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.*